



ಇಂಥ ಅಂತರಂಗ ಶಕ್ತಿಗಳ ಪರಿವೆಯಿಲ್ಲದೆಯೂ ಕಾವ್ಯ ರಚಿಸಬಲ್ಲವರಿಲ್ಲವೆ? ರಸಿಕರು ಅಂಥವರಲ್ಲೊಬ್ಬನನ್ನು ವರಕವಿ ಎಂದು ಪರಿಗಣಿಸಬಹುದಲ್ಲ? ಇಷ್ಟಕ್ಕೂ ವರಕವಿ ಎಂದರೆ ಯಾರು? ಯಾರು ಕಾವ್ಯರಚನಾ ಶಕ್ತಿಯನ್ನು ಹುಟ್ಟಿನಿಂದಲೇ ಸಹಜವಾಗಿ ಪಡೆದುಬಂದಿರುತ್ತಾನೋ ಅವನು ವರಕವಿ. ಅಂಥವನಿಗೆ ಮಾತ್ರೆಗಳ, ಅಲಂಕಾರಗಳ ಲೆಕ್ಕಾಚಾರ ಗೊತ್ತಿರುತ್ತದೆ. ಅವನು ಒಂದು ಸಾಲಿನ ಕೊನೆಗೆ 'ನಮ್ಮೂರ' ಎಂದು ಬರೆದರೆ ಎರಡನೆಯ ಸಾಲಿನ ಕೊನೆಗೆ 'ಹಮ್ಮೀರ' ಎಂಬ ಶಬ್ದ ಬಂದು ಸಹಜ ಪ್ರಾಸವಾಗುತ್ತದೆ. ಅಂಥವನು ಒಳ್ಳೆಯ ಕವಿಯೊ ಕೆಟ್ಟ ಕವಿಯೊ?

ಅಮೆರಿಕದಲ್ಲಿ ಹುಟ್ಟಿದರೂ ಇಂಗ್ಲೆಂಡಿನಲ್ಲಿ, ಅದರಲ್ಲೂ ಲಂಡನ್ನಿನಲ್ಲಿ, ತನ್ನ ಜೀವನದ ಬಹುಪಾಲನ್ನು ಕಳೆದವನು ಮಹಾಕವಿ ಟಿ.ಎಸ್. ಎಲಿಯಟ್. ಅವನ ಪ್ರಕಾರ, ಕೆಟ್ಟಕವಿ ಅನುಕರಿಸಿದರೆ ಒಳ್ಳೆಯ ಕವಿ ಕದಿಯುತ್ತಾನೆ. ಕೆಟ್ಟಕವಿ ತಾನು ಸ್ವೀಕರಿಸಿದ್ದನ್ನು ಹಾಳುಮಾಡಿದರೆ ಒಳ್ಳೆಯ ಕವಿ ತಾನು ಕದ್ದದ್ದನ್ನು ಇನ್ನಷ್ಟು ಬೆಳಗಿಸುತ್ತಾನೆ ಅಥವಾ ಕೊನೆಯ ಪಕ್ಷ ಪರಿವರ್ತಿಸುತ್ತಾನೆ.

ಲಂಡನ್ನಿನಲ್ಲಿ ಮಳೆಯ ಜೊತೆ ಚಳಿಗಾಳಿಯೂ ಬೀಸುತ್ತಿದ್ದ ಆ ಸಂಜೆ ಆ ಬಾಡಿಗೆ ಕವಿ ಎಂಥ ಕವನ ರಚಿಸುತ್ತಿದ್ದಿರಬಹುದು? ಕಾಲ ಮೇಲೆ ಕಾಲು ಹಾಕಿಕೊಂಡು ಆರಾಮವಾಗಿ ಕೂತು ಟೈಪ್‌ರೈಟರಿನ ಕೀಗಳನ್ನು, ಮರ ಕೊರೆಯುವ ಮರಕುಟಿಗನಂತೆ, ಲಯಬದ್ಧವಾಗಿ ಟಕಟಕಿಸುತ್ತಿದ್ದ ಆತನಿಗೆ ಯಾವುದೇ ಅವಸರ ಅಥವಾ ಆತಂಕ ಇದ್ದಿರಲಿಕ್ಕಿಲ್ಲ. ಅವನೇನು ಒಳ್ಳೆಯ ಕವಿಯೆ? ಕೆಟ್ಟ ಕವಿಯೆ? ಅನುಕರಿಸುವ ಕವಿಯೆ ಅಥವಾ ಕದಿಯುವ ಕವಿಯೆ? ಅಷ್ಟೇನೂ ಯಶಸ್ಸು ಕಾಣದ ಕವಿಯೆ? ಹಣಕಾಸಿನ ಮುಗ್ಗಟ್ಟಿನಿಂದಾಗಿ ಬೀದಿ ಬದಿಗೆ ಬಂದು ಕೂತವನೆ? ಅವನು ಟೈಪು ಮಾಡುತ್ತಿದ್ದ ರಭಸವನ್ನು ನೋಡಿದ ಯಾರಿಗೂ ಅವನಲ್ಲಿ ಅಪಾರ ಆತ್ಮವಿಶ್ವಾಸ, ಶಬ್ದಸಂಪತ್ತು, ವ್ಯುತ್ಪತ್ತಿ ಇತ್ತೆಂದು ಅನ್ನಿಸಲೇಬೇಕು. (ವ್ಯುತ್ಪತ್ತಿಯಿದ್ದರೆ ಉತ್ಪತ್ತಿ!).

ಆತ ಹನಿಗವನವನ್ನೇನೂ ರಚಿಸುತ್ತಿದ್ದಿರಲಿಕ್ಕಿಲ್ಲ. ಯಾಕೆಂದರೆ ನಾನು ಅವನನ್ನು ನೋಡುತ್ತಿದ್ದಷ್ಟು